(ಈ) ಈ ನೌಕರರ ಸಂಬಳ ಸಾರಿಗೆ ಸೇವಾ ನಿಯಮಗಳನ್ನು ಉತ್ತಮಗೊಳಿಸಲು ಸರ್ಕಾರ ಆಲೋಚಿಸುತ್ತಿರುವುದು ನಿಜವೇ ?

ಶ್ರೀ ಎಂ. ವೀರಪ್ಪ ಮೊಯ್ಲಿ (ಹಣಕಾಸು ಹಾಗೂ ಪ್ರವಾಸೋದ್ಯಮ ಮಂತ್ರಿಗಳು) —

ಉತ್ತರ—(ಅ) ರಾಜ್ಯ ಸರ್ಕಾರವು ತನ್ನ ನೌಕರರ ಸೇವಾ ಸ್ಥಿತಿ ಸುಧಾರಣೆಯ ಅಂಗವಾಗಿ ವೇತನ ಮತ್ತು ತುಟ್ಟಿ ಭತ್ಯೆಯನ್ನು ಒಳಗೊಂಡಂತೆ ಭತ್ಯೆಗಳ ಪರಿಷ್ಕರಣ ಸಾಮೂಹಿಕ ವಿಮಾ ಯೋಜನೆ, ನಿವೃತ್ತಿ ಸೌಲಭ್ಯಗಳು ಮುಂತಾದ ಹಲವಾರು ಕ್ರಮಗಳನ್ನು ಕೈಗೊಂಡಿದೆ.

(ಆ) ಇಲ್ಲ.

(ಇ) ಮೇಲ್ಕಂಡ ಪ್ರಶ್ನೆ "ಆ"ದ ಉತ್ತರದ ಪ್ರಕಾರ ಈ ಪ್ರಶ್ನೆ ಉದ್ಭವಿಸುವುದಿಲ್ಲ.

(ಈ) ಹೌದು.

ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿಯು ಕೊಳಚೆ ಪ್ರದೇಶದ ಅಭಿವೃದ್ಧಿ ಮತ್ತು ನಿರ್ಮೂಲನ ಬಗ್ಗೆ

೧೨ (೩೧) ಶ್ರೀ ಪಿ. ರಾಮದೇವ್ (ಮಲ್ಲೇಶ್ವರ)—ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳ ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :—

(ಅ) ರಾಜ್ಯ ಕೊಳಚೆ ಮಂಡಳಿಯು ಕಳೆದ ಎರಡು ವರ್ಷಗಳಿಂದ ಕೊಳಚೆ ಪ್ರದೇಶಗಳನ್ನು ಅಭಿವೃದ್ಧಿಪಡಿಸಲು ಮತ್ತು ನಿರ್ಮೂಲನಾ ಮಾಡಲು ಕೈಗೊಂಡ ಕ್ರಮಗಳೇನು ;

(ಆ) ಎಲ್ಲೆಲ್ಲಿ ಈ ಕೆಲಸ ಮಾಡಲಾಗಿದೆ ;

(ಇ) ಈ ಕಾರ್ಯದಲ್ಲಿ ಯಾವ್ಯಾವ ಹಣಕಾಸು ಸಂಸ್ಥೆಗಳಿಂದ ಎಷ್ಟೆಷ್ಟು ಹಣ ಮಂಜೂರಾಗಿದೆ ;

(ಈ) ರಾಜ್ಯ ಕೊಳಚೆ ಮಂಡಳಿಗೆ ಗೃಹ ನಿರ್ಮಾಣ ಮಾಡಲು ಯಾವ್ಯಾವ ಹಣಕಾಸು ಸಂಸ್ಥೆಗಳಿಂದ ಎಷ್ಟೆಷ್ಟು ಹಣ ಸಂದಾಯವಾಗಿದೆ. ಈ ರೀತಿ ಕೈಗೊಂಡ ಯೋಜನೆಗಳು ಎಲ್ಲೆಲ್ಲಿವೆ ?

ಶ್ರೀ ಧರ್ಮಸಿಂಗ್ (ವಸತಿ ಹಾಗೂ ನಗರಾಭಿವೃದ್ಧಿ ಮಂತ್ರಿಗಳು)—

ಉತ್ತರ—(ಅ) ಮುಂಡಳಿಯು ಕೊಳಚೆ ಪ್ರದೇಶಗಳನ್ನು ಅಭಿವೃದ್ಧಿಪಡಿಸಲು ಚರಂಡಿ, ಕುಡಿಯುವ ನೀರಿನ ವ್ಯವಸ್ಥೆ, ಕಕ್ಕಸುಗಳ ನಿರ್ಮಾಣ, ದೀಪದ ವ್ಯವಸ್ಥೆ ಮತ್ತು ಅವಕಾಶವಿರುವ ಸ್ಥಳಗಳಲ್ಲಿ ರಸ್ತೆಗಳನ್ನು ಇಕ್ಕಟ್ಟಾದ ಪ್ರದೇಶಗಳಲ್ಲಿ ಕಲ್ಲು ಚಪ್ಪಡಿ ಹಾಸುವ ವ್ಯವಸ್ಥೆ ಮುಂತಾದ ಅಭಿವೃದ್ಧಿ ಕಾರ್ಯಗಳನ್ನು ಮಾಡಿದೆ. ಹುಡ್ಕೊ ನೆರವಿನಿಂದ ಮನೆಗಳನ್ನು ಕಟ್ಟಲು ಬೆಂಗಳೂರಿನಲ್ಲಿ ಆರು ಕೊಳಚೆ ಪ್ರದೇಶಗಳನ್ನು ನಿರ್ಮೂಲನಾ ಮಾಡಲು ವ್ಯವಸ್ಥೆ ಮಾಡಿದೆ. ಹಾಗೂ ಇತರ ಎಂಟು ನಗರ ಪ್ರದೇಶಗಳಲ್ಲಿಯೂ ನಿರ್ಮೂಲನಾ ವ್ಯವಸ್ಥೆ ಮಾಡಿದೆ.

(ಆ) ಅಭಿವೃದ್ಧಿಪಡಿಸುವ ಕೆಲಸ :—

ಬೆಂಗಳೂರು, ಮೈಸೂರು, ಮಂಡ್ಯ, ಹುಬ್ಬಳ್ಳಿ, ಧಾರವಾಡ, ತುಮಕೂರು, ಬಿಜಾಪುರ, ಬಾಗಲಕೋಟೆ, ಬಳ್ಳಾರಿ, ರಾಯಚೂರು, ಗುಲ್ಬರ್ಗ, ಬೀದರ್, ಹಾಸನ, ಶಿವಮೊಗ್ಗ, ಗದಗ, ಗುಬ್ಬಿ, ತಿಪಟೂರು, ಕೆ.ಜಿ.ಎಫ್., ಚಿಕ್ಕಬಳ್ಳಾಪುರ.

ನಿರ್ಮೂಲನಾ ಮಾಡುವ ಬಗ್ಗೆ :—

ಬೆಂಗಳೂರು, ಶಿವಮೊಗ್ಗ, ಹಾಸನ, ಮೈಸೂರು, ಬಳ್ಳಾರಿ, ರಾಯಚೂರು, ಗುಲ್ಬರ್ಗ, ಬೀದರ್.

(ಇ) ಹುಡ್ಕೋ ಸಂಸ್ಥೆಯಿಂದ ರೂ. ೪೮.೦೩ ಲಕ್ಷ ಸಾಲವಾಗಿ ಈ ಮಂಡಳಿಗೆ ಮಂಜೂರಾಗಿದೆ.

(ಈ) ಹುಡ್ಕೋ ಸಂಸ್ಥೆಯು ಈ ಕೆಳಕಂಡ ಸ್ಥಳಗಳಲ್ಲಿ ಗೃಹ ನಿರ್ಮಾಣ ಮಾಡಲು ರೂ. ೪೧೯.೦೩ ಲಕ್ಷ ಸಾಲ ಮಂಜೂರು ಮಾಡಿದೆ. ಇದುವರೆಗೆ ರೂ. ೧೨೯.೨೨ ಲಕ್ಷ ಹಣವನ್ನು ಪಡೆದಿರುತ್ತೇವೆ.

ಈ ರೀತಿ ಕೈಗೊಂಡ ಯೋಜನೆಗಳು ಬೆಂಗಳೂರು, ಮಂಡ್ಯ, ಮೈಸೂರು, ತಿಪಟೂರು, ಹಾಸನ, ಬಳ್ಳಾರಿ, ರಾಯಚೂರು, ಗುಲ್ಬರ್ಗ, ಬೀದರ್ ಜಿಲ್ಲೆಗಳಲ್ಲಿವೆ.

ಹಾಸನದಲ್ಲಿ ಶಾಲಾ ಕಟ್ಟಡಗಳ ಬಗ್ಗೆ

೧೩. (೩೪) ಶ್ರೀ ಕೆ. ಹೆಚ್. ಹನುಮೇಗೌಡ (ಹಾಸನ)—ಪ್ರೈಮರಿ ಮತ್ತು ಸೆಕೆಂಡರಿ ವಿದ್ಯಾ ರಾಜ್ಯ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :—

(ಅ) ಹಾಸನ ಟೌನಿನಲ್ಲಿ ಎಷ್ಟು ಪ್ರೈಮರಿ ಮತ್ತು ಮಿಡಲ್ ಸ್ಕೂಲುಗಳು ಖಾಸಗಿ ಕಟ್ಟಡಗಳಲ್ಲಿ ನಡೆಯುತ್ತಿದೆ, ಈ ವರ್ಷದ ವಿವರಗಳನ್ನು ತಿಳಿಸಿ ;

(ಆ) ಈ ಕಟ್ಟಡಗಳ ಪೈಕಿ ಎಷ್ಟು ಕಟ್ಟಗಳು ಶಾಲೆ ನಡೆಸಲು ಯೋಗ್ಯವಾಗಿರುವುದಿಲ್ಲ ಎಂಬ ವಿವರಗಳನ್ನು ತಿಳಿಸಿ ;

(ಇ) ಇಂತಹ ದಂಸ್ಥಿತಿಯಲ್ಲಿರುವ ಶಾಲೆಗಳಿಗೆ ಕಟ್ಟಡ ಒದಗಿಸಲು ಸರ್ಕಾರ ಏನು ಕಾರ್ಯಕ್ರಮ ಗಳನ್ನು ಕೈಗೊಂಡಿದೆ ?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಪ್ರೈಮರಿ ಮತ್ತು ಸೆಕೆಂಡರಿ ವಿದ್ಯಾ ರಾಜ್ಯ ಮಂತ್ರಿಗಳು)—

ಉತ್ತರ—(ಅ) ೭ ಪಾಠ ಶಾಲೆಗಳು (೫ ವರ್ಷದ ವಿವರಗಳ ಪಟ್ಟಿಯನ್ನು ಲಗತ್ತಿಸಿದೆ).

(ಆ) ೪ ಶಾಲಾ ಕಟ್ಟಡಗಳು.

(ಇ) ಹಾಸನದ ಜಿಲ್ಲಾಧಿಕಾರಿಗಳು ಈಗಾಗಲೇ ೧೯೭೯-೮೦ ಮತ್ತು ೧೯೮೦-೮೧ನೇ ಸಾಲಿನಲ್ಲಿ ಪ್ರತಿ ವರ್ಷಕ್ಕೆ ಎರಡು ಕೊಠಡಿಗಳಂತೆ ೪ ಕೊಠಡಿಗಳಿಗೆ ಅನುದಾನವಾಗಿ ರೂ. ೧೮,೦೦೦ ನಗರಸಭೆಗೆ ಮಂಜೂರು ಮಾಡಿದ್ದಾರೆ. ಅದರಂತೆ ನಗರಸಭೆಯನ್ನು ಜಾಗ್ರತೆಯಾಗಿ ೪ ಶಾಲಾ ಕೊಠಡಿಗಳನ್ನು ಕಟ್ಟಿಸುವಂತೆ ಒತ್ತಾಯಿಸಲಾಗುತ್ತಿದೆ.

High level causeway on Chikka Hagari in H. B. Halli, Bellary District

14 (43) Sri N. Karibasavana Gowda (Hadagali)—Will the Minister for Public Works be pleasd to state :—

(a) when was high level causeway on Chikka Hagari in H. B. Halli taluk near Alboor was taken up and completed and opened for public traffic ;

(b) how many acres of private agricultural lands were acquired from the people and whether it is a fact that these land owners are all ST/SC people ;

(c) the reasons for delay in paying land compensation to these weaker sections of the people ;

(d) whether there was any flood damage to this cause way on 8th October 1981 ;

(e) if so, the reasons for the delay in repairing them ?